ದಿನಾಂಕಃ **27-11-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 3 ರವರ ಪರ ಶ್ರೀ ಬಿ ಕೆ ಎನ್ ವಕೀಲರಿಂದ,**

1) ಅಸಲು ದಾವೆ ಸಂಖ್ಯೆ: 14/2021 ದಾವೆಯಲ್ಲಿ ವಾದಿಯನ್ನು ನಾನು ಅವರ ಮನೆಗೆ ಹೋಗಿ ಕರೆದುಕೊಂಡು ಬಂದು ರಾಜಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೋಹನ ಕುಮಾರ ರವರಿಗೆ ಹೆಚ್ಚಿನ ಮೊತ್ತವನ್ನು ನೀಡಿ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಆಸ್ತಿಗಳಲ್ಲಿ ಕಳೆದ ವರ್ಷ ಶುಂಠಿ ಬೆಳೆ ಬೆಳೆದಿದ್ದು, ಈ ವರ್ಷ ತೆಂಗು ಬೆಳೆಯನ್ನು ಬೆಳೆದಿರುತ್ತೇನೆ. ನಾನು 1 ಎಕರೆ ಜಮೀನಿನಲ್ಲಿ 60 ಚೀಲ ಶುಂಠಿಯನ್ನು ಬೆಳೆದಿರುತ್ತೇನೆ. 1 ಚೀಲದ ಶುಂಠಿ ಬೆಲೆ 4



ರಿಂದ 5 ಸಾವಿರ ಇರುತ್ತದೆ. ನಾನು ಖರೀದಿ ಮಾಡಿದ ಆಸ್ತಿಗಳು ದಾವಾ ಜಮೀನುಗಳಿಗೆ ಹೊಂದಿಕೊಂಡಿರುತ್ತವೆ ಎಂದರೆ ಸರಿ.

2) ನಾನು ಖರೀದ ಮಾಡಿದ ಕ್ರಯ ಪತ್ರದಲ್ಲಿ ಕಡಿಮೆ ಮೊತ್ತವನ್ನು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದ ಮಾಡಿದ ಎಲ್ಲ ಕ್ರಯ ಮತ್ತು ಕರಾರು ಪತ್ರಗಳಿಗೆ ದೀಲಿಪ್ ಮತ್ತು ಸಂಜಯ ರವರೇ ಸಾಕ್ಷಿದಾರರಾಗಿ ಸಹಿಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಾವ, ನಾನು ಧನಪಾಲ ರವರು ಸೇರಿ ಕ್ರಯ ಪತ್ರವನ್ನು ಸೃಷ್ಟಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-10 ರಿಂದ 17 ದಾಖಲಾತಿಗಳು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ಖುಷ್ಕಿ ಮತ್ತು ಕೆಬ್ಬೆ ಮಣ್ಣಿನ ಕೂಡಿದ ಜಮೀನು ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ತೋಟ ಇರುತ್ತದೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಹಣವನ್ನು ನೀಡಿ ಮೋಹನಕುಮಾರ, ಕಲಾವತಿ ಮತ್ತು ಸಾವಿತ್ರಮ್ಮ ರವರಿಂದ ಕ್ರಯ ಪತ್ರವನ್ನು

ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ–10 ರಿಂದ 17 ದಾಖಲಾತಿಗಳು ನಮೂದಾಗಿರುವ ಜಮೀನಿನ ಸ್ವರೂಪ ಮತ್ತು ದಾವಾ ಸ್ವರೂಪ ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ